# ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

## ವಿಶೇಷ ರಾಜ್ಯ ಪತ್ರಿಕೆ

| ಭಾಗ – ೩<br>Part – III | ಬೆಂಗಳೂರು, ಶನಿವಾರ, ೧೭, ಜನವರಿ, ೨೦೨೬(ಪುಷ್ಯ, ೨೭, ಶಕವರ್ಷ, ೧೯೪೭)<br>BENGALURU, SATURDAY, 17, JANUARY, 2026(PUSHYA , 27, SHAKAVARSHA, 1947) | ನಂ. ೮೨<br>No. 82 |
|---|---|---|


**ಕರ್ನಾಟಕ ಸರ್ಕಾರ**

**ಕರ್ನಾಟಕ ಪಂಚಾಯತ್ ರಾಜ್ ಸೀಮಾ ನಿರ್ಣಯ ಆಯೋಗ**

**ನಂ.204, 2ನೇ ಮಹಡಿ, 3ನೇ ಗೇಟ್,**
**ಬಹುಮಹಡಿಗಳ ಕಟ್ಟಡ,**
**ಬೆಂಗಳೂರು-560001**

---

**ಸಂಖ್ಯೆ:** ಕಪಂರಾಸೀನಿಆ/69/ಪ್ರಾ.ಗ.ನಿ/2023 **ದಿನಾಂಕ:17-01-2026**

## ಪ್ರಕಟಣೆ

**ಮೈಸೂರು ಜಿಲ್ಲೆಯ, ಟಿ.ನರಸೀಪುರ ತಾಲ್ಲೂಕಿನ ಜಿಲ್ಲಾ ಪಂಚಾಯತಿ ಚುನಾಯಿತ ಸದಸ್ಯರ ಸಂಖ್ಯೆ ನಿಗದಿ ಹಾಗೂ ಪ್ರಾದೇಶಿಕ ಚುನಾವಣಾ ಕ್ಷೇತ್ರಗಳ ಸೀಮಾ/ಗಡಿ ನಿರ್ಣಯ ಕುರಿತು.**

ನಗರಾಭಿವೃದ್ಧಿ ಇಲಾಖೆಯು, **ಮೈಸೂರು** ಜಿಲ್ಲೆಯ, **ಟಿ.ನರಸೀಪುರ** ತಾಲ್ಲೂಕಿನ ಕೆಲವು ಗ್ರಾಮೀಣ ಪ್ರದೇಶಗಳನ್ನು ನಗರ ಸ್ಥಳೀಯ ಸಂಸ್ಥೆಗಳನ್ನಾಗಿ ಪರಿವರ್ತಿಸಿ ಅಧಿಸೂಚನೆಯನ್ನು ಹೊರಡಿಸಿರುತ್ತದೆ. ಈ ಹಿನ್ನೆಲೆಯಲ್ಲಿ, ಈಗಾಗಲೇ ದಿನಾಂಕ:16-12-2023ರಲ್ಲಿ ಅಧಿಸೂಚಿಸಿ ಹೊರಡಿಸಿರುವ **ಟಿ.ನರಸೀಪುರ** ತಾಲ್ಲೂಕಿನ ಜಿಲ್ಲಾ ಪಂಚಾಯಿತಿ ಪ್ರಾದೇಶಿಕ ಚುನಾವಣಾ ಕ್ಷೇತ್ರಗಳ ವ್ಯಾಪ್ತಿಯಿಂದ ಪರಿವರ್ತನೆಗೊಂಡಿರುವ ಗ್ರಾಮೀಣ ಪ್ರದೇಶಗಳನ್ನು ಕೈಬಿಡಬೇಕಾಗಿರುತ್ತದೆ. ಆದ್ದರಿಂದ, ಸರ್ಕಾರವು, ದಿನಾಂಕ:06.01.2026ರ ಕರ್ನಾಟಕ ರಾಜ್ಯ ಪತ್ರದಲ್ಲಿ **ಟಿ.ನರಸೀಪುರ** ತಾಲ್ಲೂಕಿನ ಚುನಾಯಿತ ಸದಸ್ಯರ ಸಂಖ್ಯೆ ಹಾಗೂ ಪ್ರಾದೇಶಿಕ ಚುನಾವಣಾ ಕ್ಷೇತ್ರಗಳ ಸೀಮಾ/ಗಡಿ ನಿರ್ಣಯವನ್ನು ಹಿಂಪಡೆದಿರುತ್ತದೆ. ಕರ್ನಾಟಕ ಪಂಚಾಯತ್ ರಾಜ್ ಸೀಮಾ ನಿರ್ಣಯ ಆಯೋಗವು **ಟಿ.ನರಸೀಪುರ** ತಾಲ್ಲೂಕಿನ ಪರಿಷ್ಕೃತ ಸದಸ್ಯರ ಸಂಖ್ಯೆಯನ್ನು ಹಾಗೂ ಸೀಮಾ/ಗಡಿಗಳನ್ನು ನಿಯಮಾನುಸಾರ ರಚಿಸಬೇಕಾಗಿರುತ್ತದೆ.

ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ, 1993 ರ ಪ್ರಕರಣ 160, 161 ಮತ್ತು 163ರ ಅನ್ವಯ ಹಾಗೂ 308(ಇ)(ಎಫ್)ರ ಪ್ರಕರಣದಡಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ , ಕರ್ನಾಟಕ ಪಂಚಾಯತ್ ರಾಜ್ ಸೀಮಾ ನಿರ್ಣಯ ಆಯೋಗವು **ಮೈಸೂರು** ಜಿಲ್ಲೆಯ, **ಟಿ.ನರಸೀಪುರ** ತಾಲ್ಲೂಕಿನ ಜಿಲ್ಲಾ ಪಂಚಾಯತಿ ಚುನಾಯಿತ ಸದಸ್ಯರ ಸಂಖ್ಯೆಯನ್ನು ಕೋಷ್ಠಕ **'ಅ'** ದಲ್ಲಿರುವಂತೆ ನಿಗದಿಪಡಿಸಿದೆ. '**ಅ**' ಕೋಷ್ಠಕದ **2ನೇ** ಅಂಕಣದಲ್ಲಿರುವ ತಾಲ್ಲೂಕಿನಿಂದ ಆಯ್ಕೆಯಾಗುವ ಜಿಲ್ಲಾ ಪಂಚಾಯತಿ ಸದಸ್ಯರುಗಳ ಸಂಖ್ಯೆಯನ್ನು **3ನೇ** ಅಂಕಣದಲ್ಲಿ ನಿಗದಿಪಡಿಸಿದೆ.

**ಮೈಸೂರು** ಜಿಲ್ಲೆಯ, **ಟಿ.ನರಸೀಪುರ** ತಾಲ್ಲೂಕಿನ ವ್ಯಾಪ್ತಿಯೊಳಗಿರುವ ಪ್ರದೇಶಗಳನ್ನು **6** ಏಕ ಸದಸ್ಯ ಜಿಲ್ಲಾ ಪಂಚಾಯಿತಿ ಪ್ರಾದೇಶಿಕ ಚುನಾವಣಾ ಕ್ಷೇತ್ರಗಳನ್ನಾಗಿ ವಿಂಗಡಿಸಿ ಅವುಗಳ ಸೀಮಾ/ಗಡಿಯನ್ನು ಕೋಷ್ಟಕ **'ಆ'** ದಲ್ಲಿರುವಂತೆ ನಿರ್ಣಯಿಸಿದೆ. **ಆ**' ಕೋಷ್ಠಕದ **3ನೇ** ಅಂಕಣದಲ್ಲಿ ಪ್ರತಿಯೊಂದು ಜಿಲ್ಲಾ ಪಂಚಾಯತ್ ಪ್ರಾದೇಶಿಕ ಚುನಾವಣಾ ಕ್ಷೇತ್ರದ ಸಂಖ್ಯೆ ಹಾಗೂ ಹೆಸರನ್ನು ಮತ್ತು ಕೋಷ್ಟಕದ **4ನೇ** ಅಂಕಣದಲ್ಲಿ ನಮೂದಿಸಿರುವ ಗ್ರಾಮಗಳನ್ನೊಳಗೊಂಡ ಪ್ರದೇಶವನ್ನು ಆ ಪ್ರಾದೇಶಿಕ ಚುನಾವಣಾ ಕ್ಷೇತ್ರದ ವ್ಯಾಪ್ತಿಯೆಂದು ನಿಗದಿಪಡಿಸಿದೆ.

**ಮೈಸೂರು** ಜಿಲ್ಲೆಯ, **ಟಿ.ನರಸೀಪುರ** ತಾಲ್ಲೂಕಿನ ಜಿಲ್ಲಾ ಪಂಚಾಯತಿ ಚುನಾಯಿತ ಸದಸ್ಯರ ಸಂಖ್ಯೆ ಹಾಗೂ ಪ್ರಾದೇಶಿಕ ಚುನಾವಣಾ ಕ್ಷೇತ್ರಗಳ ವ್ಯಾಪ್ತಿಗೆ ಸಂಬಂಧಿಸಿದಂತೆ ಆಕ್ಷೇಪಣೆಗಳಿದ್ದಲ್ಲಿ, ಪ್ರಕಟಣೆಯ ದಿನಾಂಕದಿಂದ **7 (ಏಳು) ದಿವಸಗಳ ಒಳಗಾಗಿ ಅಂದರೆ ದಿನಾಂಕ:23-01-2026, ಸಂಜೆ 5.00 ಗಂಟೆಯ ಒಳಗೆ** ಸಲ್ಲಿಸಲು ತಿಳಿಸಿದೆ. ಆಕ್ಷೇಪಣೆಗಳನ್ನು ಆನ್‌ಲೈನ್ ಮೂಲಕ ಹಾಗೂ ಖುದ್ದಾಗಿ/ಅಂಚೆಯ ಮೂಲಕ ಈ ಕೆಳಕಂಡ ವಿಳಾಸಕ್ಕೆ ಸಲ್ಲಿಸತಕ್ಕದ್ದು. ಅಂಚೆಯ ಮೂಲಕ ಸಲ್ಲಿಸಿದಾಗಲೂ, ಆಯೋಗವು ನಮೂದಿಸಿದ ದಿನಾಂಕದೊಳಗೆ ಸಲ್ಲಿಸತಕ್ಕದ್ದು. ನಂತರ ಸ್ವೀಕೃತವಾದ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ ಹಾಗೂ ಅಂಚೆ ಇಲಾಖೆಯ ವಿಳಂಬಕ್ಕೆ ಆಯೋಗವು ಜವಾಬ್ದಾರರಾಗಿರುವುದಿಲ್ಲ ಎಂದು ಈ ಮೂಲಕ ತಿಳಿಸಿದೆ.

**(ಅ) ಆನ್ ಲೈನ್ ಮೂಲಕ:**

**ವೆಬ್ ಸೈಟ್ ವಿಳಾಸ: "https://rdpr.karnataka.gov.in/rdc/public/"** ಸದರಿ ವೆಬ್‌ಸೈಟ್ ನ ಮುಖಪುಟದ ಎಡಭಾಗದಲ್ಲಿರುವ ಸಾರ್ವಜನಿಕ ಸಲಹೆಗಳು ಎಂಬ ಶೀರ್ಷಿಕೆಯನ್ನು CLICK ಮಾಡಿ ತಮ್ಮ ಆಕ್ಷೇಪಣೆಗಳನ್ನು ಆನ್‌ಲೈನ್ ನಲ್ಲಿ ಸಲ್ಲಿಸಬಹುದು.

**(ಆ) ಖುದ್ದಾಗಿ/ಅಂಚೆ ಮೂಲಕ:**

ಕರ್ನಾಟಕ ಪಂಚಾಯತ್ ರಾಜ್ ಸೀಮಾ ನಿರ್ಣಯ ಆಯೋಗ.
3ನೇ ಗೇಟ್, 2ನೇ ಮಹಡಿ, ಕೊಠಡಿ ಸಂಖ್ಯೆ: 222/A, ಬಹುಮಹಡಿ ಕಟ್ಟಡ,
ಅಂಬೇಡ್ಕರ್ ವೀಧಿ, ಬೆಂಗಳೂರು-560001.

**ಕೋಷ್ಟಕ "ಅ"**

| ಮೈಸೂರು ಜಿಲ್ಲೆ | | |
|---|---|---|
| ಕ್ರ. ಸಂ. | ತಾಲ್ಲೂಕಿನ ಹೆಸರು | ಜಿಲ್ಲಾ ಪಂಚಾಯತಿಯ ಸದಸ್ಯರ ಸಂಖ್ಯೆ |
| 1 | 2 | 3 |
| | ಟಿ.ನರಸೀಪುರ | 6 |

**ಕೋಷ್ಟಕ "ಆ"**

| ಮೈಸೂರು ಜಿಲ್ಲೆ | | | |
|---|---|---|---|
| ಕ್ರ ಸಂ | ತಾಲ್ಲೂಕಿನ ಹೆಸರು | ಜಿಲ್ಲಾ ಪಂಚಾಯತಿ ಪ್ರಾದೇಶಿಕ ಚುನಾವಣಾ ಕ್ಷೇತ್ರದ ಸಂಖ್ಯೆ ಮತ್ತು ಹೆಸರು | ಜಿಲ್ಲಾ ಪಂಚಾಯತಿ ಪ್ರಾದೇಶಿಕ ಚುನಾವಣಾ ಕ್ಷೇತ್ರದ ವ್ಯಾಪ್ತಿಯಲ್ಲಿನ ಗ್ರಾಮಗಳ ಹೆಸರು |
| 1 | 2 | 3 | 4 |
| 1 | ಟಿ.ನರಸೀಪುರ | 7- ತುರುಗನೂರು | ಬಿ.ಸೀಹಳ್ಳಿ, ಭುಗತಹಳ್ಳಿ, ಹುಣಸಗಹಳ್ಳಿ, ಮಾರಗೌಡನಹಳ್ಳಿ, ಕೊಡಗಹಳ್ಳಿ, ಅರವಟ್ಟಿಗೆಕೊಪ್ಪಲು, ಮಾದಿಗಹಳ್ಳಿ, ತುರಗನೂರು, ಬಾಣಗವಾಡಿ, ಹನುಮನಾಳು, ಬೀಡನಹಳ್ಳಿ, ಯಡಹಳ್ಳಿ, ದಾಸೇಗೌಡನಕೊಪ್ಪಲು, ಗೊರವನಹಳ್ಳಿ, ಅಂಕನಹಳ್ಳಿ,ಕೆಂಪೇಗೌಡನಕೊಪ್ಪಲು,ದೊಡ್ಡ ಮುಲಗೂಡು, ಮೆಣಸಿಕ್ಯಾತನಹಳ್ಳಿ, ಕಾಡುಕೊತ್ತನಹಳ್ಳಿ, ಕರಿಹುರುಳಿ ಕೊಪ್ಪಲು, ಯಾಚೇನಹಳ್ಳಿ. |
| 2 | ಟಿ.ನರಸೀಪುರ | 8-ಸೋಮನಾಥಪುರ | ಕೇತುಪುರ, ಕಗ್ಗಲೀಪುರ, ಶ್ರೀರಂಗರಾಜಪುರ, ಸೋಮನಾಥಪುರ, ಕುಳ್ಳನಕೊಪ್ಪಲು, ಜಗಜೀವನಗ್ರಾಮ, ಉಕ್ಕಲಗೆರೆ, ಬೂದಹಳ್ಳಿ, ಚಿಕ್ಕಲಕ್ಷ್ಮಿಪುರ, ಮದ್ದಾರಲಿಂಗಯ್ಯನಹುಂಡಿ, ಕನ್ನನಾಯಕನಹಳ್ಳಿ, ಚನ್ನವೀರೇಗೌಡನಕೊಪ್ಪಲು, ಮಲಿಯೂರು, ವಡ್ಡರಕೊಪ್ಪಲು, ಹೆಗ್ಗೂರು, ನುಗ್ಗೇಹಳ್ಳಿಕೊಪ್ಪಲು, ನಂಜಾಪುರ, ಬಸವನಹಳ್ಳಿ, ಕಳ್ಳಿಪುರ, ಅತ್ತಹಳ್ಳಿ, |

| ಮೈಸೂರು ಜಿಲ್ಲೆ | | | |
|---|---|---|---|
| ಕ್ರ ಸಂ | ತಾಲ್ಲೂಕಿನ ಹೆಸರು | ಜಿಲ್ಲಾ ಪಂಚಾಯತಿ ಪ್ರಾದೇಶಿಕ ಚುನಾವಣಾ ಕ್ಷೇತ್ರದ ಸಂಖ್ಯೆ ಮತ್ತು ಹೆಸರು | ಜಿಲ್ಲಾ ಪಂಚಾಯತಿ ಪ್ರಾದೇಶಿಕ ಚುನಾವಣಾ ಕ್ಷೇತ್ರದ ವ್ಯಾಪ್ತಿಯಲ್ಲಿನ ಗ್ರಾಮಗಳ ಹೆಸರು |
| 1 | 2 | 3 | 4 |
| | | | ಕಂಚನಹಳ್ಳಿ, ಬಿ.ಬೆಟ್ಟಹಳ್ಳಿ, ಮೇಗಳಕೊಪ್ಪಲು, ಕುಂತನಹಳ್ಳಿ, ಬೇವಿನಹಳ್ಳಿ, ಗಾಣಿಗನಕೊಪ್ಪಲು, ಸೇನಾಪತಿಹಳ್ಳಿ. |
| 3 | **ಟಿ.ನರಸೀಪುರ** | 9-ಸೋಸಲೆ | ಸೋಸಲೆ, ವ್ಯಾಸರಾಜಪುರ, ಸಿದ್ದನಹುಂಡಿ, ಎಸ್.ಕೆ.ಪಿ.ಅಗ್ರಹಾರ, ಹಸುವಟ್ಟಿ, ಹೊರಳಹಳ್ಳಿ, ದೊಡ್ಡೇಬಾಗಿಲು, ದೊಡ್ಡಬಾಗಿಲುಮೋಳೆ, ಆಚಾರಯ್ಯನಹುಂಡಿ, ನರೀಪುರ, ಕಾರ್ಗಳ್ಳಿ, ಕೃಷ್ಣಾಪುರ(ಕಾರ್ಗಳ್ಳಿ), ಹಲವಾರ, ಕೊಳತ್ತೂರು,ಸಿಗೋಡಿಪುರ, ಚಿದರವಳ್ಳಿ, ಎಸ್ ದೊಡ್ಡಪುರ, ಕೆಂಪನಪುರ, ರಾಮೇಗೌಡನಪುರ, ಬೊಮ್ಮನಹಳ್ಳಿ,ಚಿಮಿಲಿ, ಕೋಣಗಹಳ್ಳಿ, ನಾಗಲಗೆರೆ, ನೆರಗ್ಯಾತನಹಳ್ಳಿ, ಮುಡುಕನಪುರ, ಬೆನಕನಹಳ್ಳಿ, ಕೆಂಡನಕೊಪ್ಪಲು, ಚಿಕ್ಕಬೂಹಳ್ಳಿ, ಮುತ್ತಲವಾಡಿ (ಕೃಷ್ಣಾಪುರ), ಎಂ.ಕೆಬ್ಬೇಹುಂಡಿ, ಮುಸುವಿನಕೊಪ್ಪಲು, ಕೈಯಂಬಳ್ಳಿ, ಎಸ್ ಮೇಗಡಹಳ್ಳಿ, ಹುಳುಕನಹುಂಡಿ. |
| 4 | **ಟಿ.ನರಸೀಪುರ** | 10-ಕಾವೇರಿಪುರ (ಹೊಳೆಸಾಲು) | ಕಾವೇರಿಪುರ(ಹೊಳೆಸಾಲು), ಬಣವೆ, ಮೇದಿನಿ, ಮಡವಾಡಿ, ಕಾಳಿಹುಂಡಿ(ಕೊಪ್ಪಾಳು), ಬಿ.ಶೆಟ್ಟಹಳ್ಳಿ,(ಕುಕ್ಕೂರು), ಕಾಳಬಸವನಹುಂಡಿ, ಟಿ.ಮೇಗಡಹಳ್ಳಿ, ವಿಜಾಪುರ, ಕಟ್ಟೇಪುರ, ಹೆಮ್ಮಿಗೆ, ಜಾಲಹಳ್ಳಿ, ಚಂದಹಳ್ಳಿ, ಮರಡೀಪುರ, ಹೊಸಚನ್ನಬಸವಯ್ಯನಹುಂಡಿ, ಅಕ್ಕೂರು, ಟಿ.ದೊಡ್ಡಪುರ, ತೊಟ್ಟವಾಡಿ, ದೊಡ್ಡನಹುಂಡಿ, ಶಂಭುದೇವನಪುರ, ಕಲಿಯೂರು, ಮಾಲಂಗಿ, ಮಂಗಿಪಚ್ಚನಹುಂಡಿ, ಮಾವಿನಹಳ್ಳಿ. |
| 5 | **ಟಿ.ನರಸೀಪುರ** | 11-ಮೂಗೂರು | ಮೂಗೂರು, ಮಾದಾಪುರ, ನಿಲಸೋಗೆ, ಚೌಹಳ್ಳಿ, ಹಿರಿಯೂರು, ಹೊಸಪುರ, ಕೊತ್ತೇಗಾಲ, ಕುರುಬೂರು, ಕನ್ನಹಳ್ಳಿ, ಕನ್ನಹಳ್ಳಿ ಮೊಳೆ, ಎಂ.ಸಿ.ಹಳ್ಳಿ, ಮಾಡ್ರಹಳ್ಳಿ, ಹೊಸಹಳ್ಳಿ, ಆದಿಬೆಟ್ಟಹಳ್ಳಿ, ವಾಟಾಳು, ವಾಟಾಳುಪುರ, ಹ್ಯಾಕನೂರು, ಮೂಗೂರುಮೋಳೆ, ಸುಜ್ಜಲೂರು, ಕರೋಹಟ್ಟಿ, ಕೇತಹಳ್ಳಿ, ಯರಗನಹಳ್ಳಿ, ಧರ್ಮಯ್ಯನಹುಂಡಿ, ಬನ್ನಹಳ್ಳಿ, ಬನ್ನಹಳ್ಳಿ ಹುಂಡಿ. |
| 6 | **ಟಿ.ನರಸೀಪುರ** | 12-ಗರ್ಗೇಶ್ವರಿ | ಗರ್ಗೇಶ್ವರಿ, ಕಿರಗಸೂರು, ಬಿಳಿಗೆರೆಹುಂಡಿ, ಮನ್ನೆಹುಂಡಿ, ಡಣಾಯಕನಪುರ, ಹುಣಸೂರು, ತುಂಬಲ, ಮುತ್ತತ್ತಿ, ರಾಮನಾಥಪುರದ ಹುಂಡಿ, ಬೊಮ್ಮನಾಯಕನಹಳ್ಳಿ, ಅಗಸ್ತಾಪುರ, ಹಿಟ್ಟುವಳ್ಳಿ, ಹೊಸಕೋಟೆ, ಹೊಸಕೆಂಪಯ್ಯನಹುಂಡಿ, ಇಂಡುವಾಳು, ಯಡದೊರೆ, ಕುಪ್ಯಾ, ರಂಗಸಮುದ್ರ, ರಂಗನಾಥಪುರ, ರಂಗಾಚಾರಿಹುಂಡಿ, ಮಾದೇಗೌಡನಹುಂಡಿ, ಹುನುಗನಹಳ್ಳಿ, ಪಟ್ಟೇಹುಂಡಿ. |

R.N.I. No. KARBIL/2001/47147 POSTAL REGN. No. RNP/KA/BGS/2202/2017-19
Licensed to post without prepayment **WPP No. 297**



## ವಿಶೇಷ ಸೂಚನೆ:-

**ಮೈಸೂರು ಜಿಲ್ಲೆಯ, ಟಿ.ನರಸೀಪುರ ತಾಲ್ಲೂಕಿನ ಜಿಲ್ಲಾ ಪಂಚಾಯತಿ ಕ್ಷೇತ್ರಗಳ ಚುನಾಯಿತ ಸದಸ್ಯರ ಸಂಖ್ಯೆ ಮತ್ತು ಪ್ರಾದೇಶಿಕ ಚುನಾವಣಾ ಕ್ಷೇತ್ರಗಳ ಸೀಮಾ/ಗಡಿ ನಿರ್ಣಯ ಕುರಿತಂತೆ, ದಿನಾಂಕ:23-01-2026ರ ಒಳಗಾಗಿ ಸಲ್ಲಿಸಲ್ಪಟ್ಟ ಆಕ್ಷೇಪಣೆ/ಅಹವಾಲುಗಳ ಪರಿಶೀಲನಾ ಅದಾಲತ್ ಅನ್ನು ದಿನಾಂಕ:27-01-2026 ರಂದು ಬೆಳಿಗ್ಗೆ10:30 ರಿಂದ ಮಧ್ಯಾಹ್ನ 1:30 ರವರೆಗೆ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಗೇಟ್-ನಂ-2, 2ನೇ ಮಹಡಿ, ಕೊಠಡಿ ಸಂಖ್ಯೆ:229, 230 ಬಹುಮಹಡಿಗಳ ಕಟ್ಟಡ, ಬೆಂಗಳೂರು-560001 ಇಲ್ಲಿ ನಡೆಸಲಾಗುವುದು. ಆಕ್ಷೇಪಣೆ ಮತು ಅಹವಾಲುಗಳನ್ನು ಸಲ್ಲಿಸಿರುವವರು ಅದಾಲತ್ ನಲ್ಲಿ ಭಾಗವಹಿಸಲು ಇಚ್ಛಿಸಿದಲ್ಲಿ, ಸರ್ಕಾರದಿಂದ ನೀಡಿರುವ ಭಾವಚಿತ್ರವುಳ್ಳ ಗುರುತಿನ ಚೀಟಿಯ ಮೂಲ ಪ್ರತಿಯನ್ನು ತಮ್ಮೊಂದಿಗೆ ಕಡ್ಡಾಯವಾಗಿ ತರತಕ್ಕದ್ದು.**

**ಡಾ||ಎನ್. ನೋಮೇಶ್ ಕುಮಾರ್)**
ನಿರ್ದೇಶಕರು (ಪಂ. ರಾಜ್) ಮತ್ತು
ಪದನಿಮಿತ್ತ ಸರ್ಕಾರದ ಉಪ ಕಾರ್ಯದರ್ಶಿ
ಹಾಗೂ ಸದಸ್ಯ ಕಾರ್ಯದರ್ಶಿ
ಕರ್ನಾಟಕ ಪಂಚಾಯತ್ ರಾಜ್ ಸೀಮಾ ನಿರ್ಣಯ ಆಯೋಗ

ಮುದ್ರಕರು ಹಾಗೂ ಪ್ರಕಾಶಕರು:- ಸಂಕಲನಾಧಿಕಾರಿಗಳು, ಕರ್ನಾಟಕ ರಾಜ್ಯಪತ್ರ, ಸರ್ಕಾರಿ ಕೇಂದ್ರ ಮುದ್ರಣಾಲಯ, ಬೆಂಗಳೂರು

THAMMAIAH